# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@yahoo.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.


ಸಂಖ್ಯೆ: ಕೆಇಪಿಜಿಟಿ/ಪಿ19/2013-14/ 4539 ದಿನಾಂಕ: 09 JAN 2014

## ಸುತ್ತೋಲೆ

ವಿಷಯ: ಪ್ರತಿ ಮಾಹೆ ಪಿಂಚಣಿ/ಕುಟುಂಬ ಪಿಂಚಣಿ ನಿಧಿ ಕೋರಿಕೆಯಲ್ಲಿ ವಿವರಣೆ ನೀಡುವ ಕುರಿತು.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಸಂಖ್ಯೆ: ಕೆಇಪಿಜಿಟಿ/ಪಿ19/2013-14/ಸಿವೈಎಸ್26 ದಿನಾಂಕ: 11.10.2013.
2. ಈ ಕಛೇರಿ ನೆನಪೋಲೆ ಸಂಖ್ಯೆ: ಕೆಇಪಿಜಿಟಿ/ಪಿ19/2013-14/ಸಿವೈಎಸ್32 ದಿನಾಂಕ: 25.11.2013.
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಕೆಇಪಿಜಿಟಿ/ಪಿ19/2013-14/ಸಿವೈಎಸ್35 ದಿನಾಂಕ: 03.12.2013.

* * * * *

ಎಲ್ಲಾ ಲೆಕ್ಕ ಘಟಕಗಳು ಪ್ರತಿ ಮಾಹೆ ಪಿಂಚಣಿ/ಕುಟುಂಬ ಪಿಂಚಣಿ ಪಾವತಿಸುವ ಸಲುವಾಗಿ ಈ ಕಛೇರಿಗೆ ಕೋರಿಕೆ ಸಲ್ಲಿಸುತ್ತಿದ್ದು ಅವುಗಳಲ್ಲಿ ಹಲವಾರು ನ್ಯೂನತೆಗಳು ಕಂಡುಬಂದಿದ್ದರೂ ಸಹ ಪಿಂಚಣಿ/ಕುಟುಂಬ ಪಿಂಚಣಿದಾರರ ಹಿತ ಕಾಪಾಡುವ ಸಲುವಾಗಿ ನಿಧಿ ವರ್ಗಾವಣೆಯನ್ನು ನಿಯತವಾಗಿ ಮಾಡಲಾಗಿರುತ್ತದೆ.

ಮುಂದುವರೆಸುತ್ತಾ, ಉಲ್ಲೇಖಿತ ಸುತ್ತೋಲೆಗಲ್ಲಿ ಪ್ರತಿ ಮಾಹೆ ನಿಗದಿತ ನಮೂನೆಯಲ್ಲಿ ನಿಧಿ ಕೋರಿಕೆ ಸಲ್ಲಿಸಿ ಸಂಬಂಧಪಟ್ಟ ಲೆಕ್ಕಘಟಕಗಳು ಪಿಂಚಣಿ/ಕುಟುಂಬ ಪಿಂಚಣಿದಾರರ ಸಂಖ್ಯೆಗಳಲ್ಲಿ ಹೆಚ್ಚು/ಕಡಿಮೆ ಆಗಿರುವುದಕ್ಕೆ ದೃಢೀಕರಣ ನೀಡಲು ಸೂಚಿಸಲಾಗಿದೆ. **ಡಿಸೆಂಬರ್ – 2013 ರ ನಿಧಿ ಕೋರಿಕೆಗಳನ್ನು ಪರಿಶೀಲಿಸಿದಾಗ ಬಹುತೇಕ ಲೆಕ್ಕಘಟಕಗಳು** ಈ ದೃಢೀಕರಣವನ್ನು ನೀಡದೆ ಇರುವುದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೂಡಲೇ ದೃಢೀಕರಣ ನೀಡದ ಲೆಕ್ಕಘಟಕಗಳು ಒಂದು ವಾರದೊಳಗೆ ದೃಢೀಕರಣ ನೀಡಲು ಹಾಗೂ ಎಲ್ಲಾ ಲೆಕ್ಕಘಟಕಗಳು ಪ್ರತಿ ಮಾಹೆ ಉಲ್ಲೇಖಿತ 1 ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ನಿಧಿ ಕೋರಿಕೆಯಲ್ಲಿ ಈ ದೃಢೀಕರಣ ನೀಡಲು ಸೂಚಿಲಾಗಿದೆ.

ಲೆಕ್ಕಘಟಕಗಳು ಇನ್ನೂ ಮುಂದೆ ಪ್ರತಿ ಮಾಹೆ ಸಲ್ಲಿಸುವ ನಿಧಿ ಕೋರಿಕೆಯಲ್ಲಿ ಮೇಲೆ ತಿಳಿಸಿದ ದೃಢೀಕರಣವಿಲ್ಲದ್ದಿದ್ದಲ್ಲಿ ಆ ತಿಂಗಳಿನ ನಿಧಿಯನ್ನು ತಡೆಹಿಡಿಯಲಾಗುವುದು ಹಾಗೂ ನಿಧಿ ಬಿಡುಗಡೆ ಆಗದೇ ಉಂಟಾಗಬಹುದಾದ ತೊಂದರೆಗಳಿಗೆ ಸಂಬಂಧಿಸಿದ ಲೆಕ್ಕಘಟಕಗಳೇ ನೇರವಾಗಿ ಜವಾಬ್ದಾರರಾಗಿರುವುದಾಗಿ ಈ ಮೂಲಕ ಸೂಚಿಸಲಾಗಿದೆ. ಎಲ್ಲಾ ವಿಸಕಂಗಳ/ಕವಿಪ್ರನಿನಿಯ ಆರ್ಥಿಕ ಸಲಹೆಗಾರರು ಸದರಿ ವಿಷಯದ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

9/1/14

ನಿಯಂತ್ರಣಾಧಿಕಾರಿ ಮತ್ತು ವ್ಯವಸ್ಥಾಪಕ ಟ್ರಸ್ಟಿ
ಪಿಂಚಣಿ ಮತ್ತು ಉಪದಾನ ಟ್ರಸ್ಟ್.

ಪ್ರತಿ:

ಆರ್ಥಿಕ ಸಲಹೆಗಾರರು(ಲೆ.ಸಂ), ಕವಿಪ್ರನಿನಿ, 7ನೇ ಮಹಡಿ, ಕಾವೇರಿ ಭವನ, ರವರ ಅವಗಾಹನೆಗೆ.

ಎಲ್ಲಾ ಆರ್ಥಿಕ ಸಲಹೆಗಾರರು, ಬೆವಿಕಂ/ಸೆಸ್ಕ್/ಗುವಿಕಂ/ಹುವಿಕಂ/ಮವಿಕಂ, ರವರ ಅವಗಾಹನೆಗೆ.

ಅಧೀಕ್ಷಕ ಇಂಜಿನಿಯರ್ (ವಿ), ಮಾಹಿತಿ ತಂತ್ರಜ್ಞಾನ, ಗಣಕ ಯಂತ್ರ ಶಾಖೆ, ಕಾವೇರಿ ಭವನ, ಬೆಂಗಳೂರು-09, ಕೆಇಪಿಜಿಟಿ ವೆಬ್‌ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.

ಎಲ್ಲಾ

ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನಾ ವಿಭಾಗ, ಬೆವಿಕಂ/ಚಾವಿಸನಿ/ಗುವಿಸಕಂ/ಹುವಿಸಕಂ/ಮವಿಸಕಂ.

ಲೆಕ್ಕಾಧಿಕಾರಿಗಳು, ಕವಿಪ್ರನಿನಿ, ಎಂ ಆರ್ ಎಸ್, ಶಿವಮೊಗ್ಗ/ವ್ಯವಸ್ಥಾಪಕರು(ನ&ಲೆ), ಕಾವೇರಿ ಭವನ.

AB B1 10/1/14